# ಸಾರ್ವಜನಿಕ ಪ್ರಕಟಣೆ

## ಮತದಾರರ ಪಟ್ಟಿಗಳ ಸಂಕ್ಷಿಪ್ತ ಪರಿಷ್ಕರಣೆ -2008

ಭಾರತ ಚುನಾವಣಾ ಆಯೋಗದ ಆದೇಶದಂತೆ ದಿ:1-1-2008ರ ಅರ್ಹತಾ ದಿನಾಂಕಕ್ಕೆ ಪ್ರತಿ ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಗಳ ಸಂಕ್ಷಿಪ್ತ ಪರಿಷ್ಕರಣೆ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.

### 1. ಸಂಕ್ಷಿಪ್ತ ಪರಿಷ್ಕರಣೆ ಅಂದರೆ ಏನು?

ದಿ:1-1-2008 ರಂದು 18 ವರ್ಷ ಪೂರ್ಣಗೊಳ್ಳುವವರು ಹಾಗೂ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸೇರಿಲ್ಲದವರು/ಕೈಬಿಟ್ಟು ಹೋಗಿರುವವರು/ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ತಿದ್ದುಪಡಿ ಮಾಡಿಸಬೇಕಾದಲ್ಲಿ ಮತ್ತು ಬೇರೆ ಮತಗಟ್ಟೆ/ಕ್ಷೇತ್ರಕ್ಕೆ ವರ್ಗಾಯಿಸಬೇಕಾಗಿದ್ದಲ್ಲಿ ಈ ಕೆಳಕಂಡಂತೆ ನಮೂದಿಸಿರುವ ಅರ್ಜಿಯನ್ನು ಭರ್ತಿ ಮಾಡಿ ಸಂಬಂಧಪಟ್ಟ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಮತದಾನ ಕೇಂದ್ರದಲ್ಲಿ/ಅಂಚೆ ಕಛೇರಿಯಲ್ಲಿ/ ತಾಲ್ಲೂಕು ಕಛೇರಿಯಲ್ಲಿ/ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ನೀಡಿ ಸ್ವೀಕೃತಿ ಪಡೆಯಬಹುದಾಗಿರುತ್ತದೆ.

**( ಈ ಕಾರ್ಯಕ್ರಮದಡಿ ಪ್ರತಿ ಮನೆ ಮನೆಗೂ ಬಂದು ಹೆಸರುಗಳನ್ನು ಸೇರಿಸ ಲಾಗುವುದಿಲ್ಲ)**

**1. ನಮೂನೆ-6 - ಹೊಸದಾಗಿ ಹೆಸರುಗಳನ್ನು ಸೇರಿಸುವುದಕ್ಕೆ ಅರ್ಜಿ**

**2. ನಮೂನೆ-7 - ಹೆಸರುಗಳನ್ನು ಕೈಬಿಡಲು/ಆಕ್ಷೇಪಣೆ ಅರ್ಜಿ**

**3. ನಮೂನೆ-8 - ಹೆಸರುಗಳನ್ನು ತಪ್ಪಾಗಿದ್ದಲ್ಲಿ ತಿದ್ದುಪಡಿ ಬಗ್ಗೆ ಅರ್ಜಿ**

**4. ನಮೂನೆ-8ಎ- ಬೇರೆ ಮತಗಟ್ಟೆ/ಕ್ಷೇತ್ರಕ್ಕೆ ವರ್ಗಾಯಿಸಬೇಕಾಗಿದ್ದಲ್ಲಿ ನೀಡಬೇಕಾಗಿರುವ ಅರ್ಜಿ**

### 2. ಪರಿಷ್ಕರಣೆಗೆ ಗೊತ್ತುಪಡಿಸಿದ ಅವಧಿ:

(ಅ) ದಿ:2-11-2007 ಶುಕ್ರವಾರದಿಂದ 17-11-2007 ಶನಿವಾರದವರೆಗೆ

### 3. ವಿಶೇಷ ಕಾರ್ಯಾಚರಣೆಯ ಸಮಯ ಮತ್ತು ದಿನಾಂಕಗಳು:

**ದಿನಾಂಕ:4-11-2007 (ಭಾನುವಾರ)**
**ದಿನಾಂಕ:11-11-2007 (ಭಾನುವಾರ)** } **ಬೆಳಿಗ್ಗೆ 9.00 ರಿಂದ ಸಂಜೆ 6.00ರವರೆಗೆ**

**ಸೂಚನೆ:- ಈ ವಿಶೇಷ ಕಾರ್ಯಾಚರಣೆ ದಿನಾಂಕಗಳಲ್ಲಿ ಹೆಚ್ಚುವರಿ ಸಿಬ್ಬಂದಿ ರಜಾ ದಿನಗಳಲ್ಲಿಯೂ ಸಹ ಕೆಲಸ ನಿರ್ವಹಿಸುತ್ತಾರೆ.**

### 3. ನೀವು ಮಾಡಬೇಕಾದದ್ದು ಏನು?

2004 ರ ಏಪ್ರಿಲ್ ಮಾಹೆಯಲ್ಲಿ ನಡೆದ ಸಾರ್ವತ್ರಿಕ ಚುನಾವಣೆ ಸಂದರ್ಭದಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರುಗಳು ಕೈಬಿಟ್ಟಿರುವ ಬಗ್ಗೆ ವ್ಯಾಪಕವಾದ ದೂರುಗಳು ಸಾರ್ವಜನಿಕರಿಂದ ಹಾಗೂ ಸುದ್ದಿ ಮಾಧ್ಯಮಗಳ ಮುಖಾಂತರ ಬಂದಿರುವ ಹಿನ್ನೆಲೆಯಲ್ಲಿ

(ಅ) ಮೊದಲು ನಿಮ್ಮ ಹೆಸರು ಹಾಲಿ ಇರುವ ಮತದಾರರ ಪಟ್ಟಿಯಲ್ಲಿ ಸೇರಿರುತ್ತದೆಯೇ? ಎಂಬುದನ್ನು ದೃಢಪಡಿಸಿಕೊಳ್ಳಬೇಕು.

(ಆ) ಇದಕ್ಕೆ ನೀವು ವಾಸವಾಗಿರುವ ಗ್ರಾಮ/ಬಡಾವಣೆ/ಹಾಗೂ ಮನೆ ಯಾವ ಮತಗಟ್ಟೆ ವ್ಯಾಪ್ತಿಯಲ್ಲಿ ಬರುತ್ತದೆ ಎಂಬುದನ್ನು ಈ ಕೆಳಕಂಡ ವಿವರಗಳನ್ನು ಪರಿಶೀಲಿಸಿ ಕೊಂಡು ತಿಳಿದುಕೊಳ್ಳಬಹುದಾಗಿದೆ.

1. **ವಿಧಾನಸಭಾ ಕ್ಷೇತ್ರದ ಹೆಸರು :**
2. **ಮತಗಟ್ಟೆ ಸಂಖ್ಯೆ ಮತ್ತು ವಿಳಾಸ:**
3. **ಮತದಾರರ ಪಟ್ಟಿಯ ಭಾಗದ ಮತಗಟ್ಟೆಯ ಪ್ರದೇಶ(ಸೇರಿರುವ ಗ್ರಾಮ/ ಬಡಾವಣೆ ಇತ್ಯಾದಿ)**

**(ಇ) ಮತದಾರರ ಪಟ್ಟಿ ಪರಿಶೀಲನೆಗೆ ಲಭ್ಯವಿರುವ ಸ್ಥಳಗಳು:**

ದಿ:2-11-2007 ಶುಕ್ರವಾರದಿಂದ 17-11-2007 ಶನಿವಾರದವರೆಗೆ ಈ ಕೆಳಕಂಡ ಸ್ಥಳಗಳಲ್ಲಿ ನಿಮ್ಮ ವ್ಯಾಪ್ತಿಯ ಮತಗಟ್ಟೆಗಳಲ್ಲಿ ಮತದಾರರ ಪಟ್ಟಿಯು ಪರಿಶೀಲನೆಗೆ ಲಭ್ಯವಿರುತ್ತದೆ.

1. **ಮತಗಟ್ಟೆ ಕಛೇರಿಗಳಲ್ಲಿ**
2. **ಗ್ರಾಮ ಪಂಚಾಯಿತಿ ಕಛೇರಿಗಳಲ್ಲಿ**
3. **ಅಂಚೆ ಕಛೇರಿಗಳಲ್ಲಿ**
4. **ನಗರಸಭೆ/ಪುರಸಭೆ/ಹಾಗೂ ಪಟ್ಟಣ ಪಂಚಾಯಿತಿ ವಾರ್ಡ್‌ಗಳ ಕಛೇರಿ ಗಳಲ್ಲಿ**
5. **ತಾಲ್ಲೂಕು ಕಛೇರಿಗಳಲ್ಲಿ**
6. **ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ**

(ಈ) ನಿಮ್ಮ ಹೆಸರು ನಿಮ್ಮ ಮನೆ ವ್ಯಾಪ್ತಿಗೆ ಸೇರಿದ ಮತಗಟ್ಟೆಯ ಮತದಾರರ ಪಟ್ಟಿಯಲ್ಲಿ ಸೇರಿಲ್ಲದಿದ್ದಲ್ಲಿ ಅಥವಾ 1-1-2008 ಕ್ಕೆ 18 ವರ್ಷಗಳು ಪೂರ್ಣಗೊಂಡಲ್ಲಿ ನಿಮ್ಮ ಸಾಮಾನ್ಯ ವಿಳಾಸ ಹಾಗೂ ಜನ್ಮ ದಿನಾಂಕ ಗಳಿಗೆ ಸಂಬಂಧಿಸಿದ ದೃಢೀಕರಣ ದಾಖಲೆಗಳನ್ನು ನಿಮ್ಮ ವ್ಯಾಪ್ತಿಯಲ್ಲಿ ಬರುವ ಮೇಲ್ಕಂಡ ಸ್ಥಳಗಳಲ್ಲಿ ನೇಮಿಸಿರುವ ನಿರ್ದಿಷ್ಟಾಧಿಕಾರಿಗಳಿಗೆ ದಿ:2-11-2007 ರಿಂದ 17-11-2007 ರವರೆಗೆ ಕಛೇರಿ ವೇಳೆಯಲ್ಲಿ ಮತ್ತು ವಿಶೇಷ ಕಾರ್ಯಾಚರಣೆ ದಿನಾಂಕಗಳಾದ 4-11-2007 ಭಾನುವಾರ 11-11-2007 ಭಾನುವಾರದಂದು ಬೆಳಿಗ್ಗೆ 9 ರಿಂದ 6 ವರೆಗೂ ನಿಗದಿತ ನಮೂನೆ 6,7,8,8ಎ ನೀಡಿ ಸ್ವೀಕೃತಿ ಪಡೆಯಬಹುದಾಗಿ ರುತ್ತದೆ. ಈ ಬಗ್ಗೆ ಸಾರ್ವಜನಿಕರು ಮತದಾರರ ಪಟ್ಟಿಗೆ ಹೆಸರುಗಳನ್ನು ಸೇರಿಸುವುದರ ಮೂಲಕ ಮತ ಚಲಾಯಿಸುವುದನ್ನು ತಮ್ಮ ``ಆದ್ಯ ಕರ್ತವ್ಯ`` ಹಾಗೂ ``ಅತ್ಯಮೂಲ್ಯ`` ಹಕ್ಕು ಎಂದು ಭಾವಿಸಿ ಮತದಾರರ ಪಟ್ಟಿಗೆ ಹೆಸರುಗಳನ್ನು ಸೇರಿಸಲು ಕೋರಿದೆ.

ಆದುದರಿಂದ ಈ ಸಂಕ್ಷಿಪ್ತ ಪರಿಷ್ಕರಣೆಯ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಸಮಸ್ತ ಮತದಾರರು, ನಾಗರೀಕರು, ಸಾರ್ವಜನಿಕರು ಎಲ್ಲಾ ರಾಜಕೀಯ ಪಕ್ಷಗಳ ಪದಾಧಿಕಾರಿಗಳು ಸ್ವಯಂ ಸೇವಾ ಸಂಸ್ಥೆಗಳು,ಜನಪರ ಕಾಳಜಿ ಇರುವಂತಹ ಸಂಘಟನೆಗಳು ಹಾಗೂ ಸರ್ಕಾರಿ ಅಧಿಕಾರಿ/ಸಿಬ್ಬಂದಿ ವರ್ಗದವರು ಸಹಕಾರ ಹಾಗೂ ನೆರವನ್ನು ನೀಡುವುದರ ಮೂಲಕ ಸದರಿ ಕಾರ್ಯಕ್ರಮವನ್ನು ಅತ್ಯಂತ ಅರ್ಥಪೂರ್ಣವಾಗಿ ಶೇಕಡ 100 ರಷ್ಟು ಯಶಸ್ವಿಗೊಳಿಸಲು ಕೋರಲಾಗಿದೆ.

ಸಹಿ/-

ಸ್ಥಳ : ಚಿತ್ರದುರ್ಗ

**(ಅಮ್ಲಾನ್ ಆದಿತ್ಯ ಬಿಸ್ವಾಸ್)**

ಜಿಲ್ಲಾಧಿಕಾರಿಗಳು ಹಾಗೂ

ದಿನಾಂಕ :18-10-2007

ಜಿಲ್ಲಾ ಚುನಾವಣಾಧಿಕಾರಿಗಳು,

ಚಿತ್ರದುರ್ಗ ಜಿಲ್ಲೆ.

ಕರ್ನಾಟಕ ಸರ್ಕಾರ

ಚುನಾವಣೆ ...

# ಜಿಲ್ಲಾಧಿಕಾರಿಗಳಕಾರ್ಯಾಲಯ,ಚಿತ್ರದುರ್ಗಜಿಲ್ಲೆ,ಚಿತ್ರದುರ್ಗ.

ನಂ.ಚುನಾವಣೆ:ಸಿಆರ್:69/2007-08 ದಿನಾಂಕ:22-10-2007.

ಪ್ರತಿಯನ್ನು:-

1) ಉಪವಿಭಾಗಾಧಿಕಾರಿಗಳು ಹಾಗೂ ಮತದಾರರ ನೋಂದಣಾಧಿಕಾರಿಗಳು,ಚಿತ್ರದುರ್ಗ ರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
2) ಜಿಲ್ಲೆಯ ಎಲ್ಲಾ ತಹಶೀಲ್ದಾರರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
3) ಪೌರಾಯುಕ್ತರು, ನಗರಸಭೆ,ಚಿತ್ರದುರ್ಗ ರವರಿಗೆ ಕಳುಹಿಸುತ್ತಾ ಬಿಲ್‌ಕಲೆಕ್ಟರ್‌ಗಳ ಸೇವೆಯನ್ನು ತಹಶೀಲ್ದಾರ್,ಚಿತ್ರದುರ್ಗ ಇವರ ನೆರವಿಗೆ ನೀಡುವುದು
4) ಮುಖ್ಯಾಧಿಕಾರಿ,ಪುರಸಭೆ,ಚಳ್ಳಕೆರೆ, ಹೊಸದುರ್ಗ, ಹಿರಿಯೂರು ಇವರಿಗೆ ಯಥಾಕ್ರಮಕ್ಕಾಗಿ
5) ಮುಖ್ಯಾಧಿಕಾರಿ,ಪಟ್ಟಣ ಪಂಚಾಯಿತಿ,ಹೊಳಲ್ಕೆರೆ,ಮೊಳಕಾಲ್ಮೂರು ಇವರಿಗೆ ಯಥಾಕ್ರಮಕ್ಕಾಗಿ

(ಕೆ.ದಾಸಪ್ಪ)

ಜಿಲ್ಲಾಧಿಕಾರಿಗಳ ಕೇಂದ್ರಸ್ಥಾನಿಕಸಹಾಯಕರು,

ಚಿತ್ರದುರ್ಗ ಜಿಲ್ಲೆ.